# ಗ್ರೆಟಾ

## ಧೈರ್ಯಕ್ಕೆ ಸಂದ ಕೀರ್ತಿ



ಗ್ರೆಟಾ ಥನ್‌ಬರ್ಗ್ ಎಂಬ ಹದಿನಾರರ ಕಿಶೋರಿ ಈಗ ಜಗದ್ವಿಖ್ಯಾತ ಹೋರಾಟಗಾರ್ತಿ. ಸ್ವೀಡನ್ನಿನ ಈ ಹದಿನಾರರ ಬಾಲೆ ಕಳೆದ ವರ್ಷ ಸ್ವೀಡನ್ ಪಾರ್ಲಿಮೆಂಟಿನ ಮುಂದೆ ಧರಣಿ ಕುಳಿತದ್ದೇ ದೊಡ್ಡದೊಂದು ಚಳವಳಿಗೆ ಪ್ರೇರಣೆಯಾಯಿತು. ‘ಹವಾಮಾನ ಬದಲಾವಣೆಯನ್ನು ತಡೆಯಲು ಇನ್ನಷ್ಟು ಬಿಗು ಕ್ರಮಗಳನ್ನು ಸರ್ಕಾರ ಕ್ಷಿಪ್ರವಾಗಿ ಕೈಗೊಳ್ಳಬೇಕು’ ಎನ್ನುವುದು ಆಕೆಯ ಆಗ್ರಹವಾಗಿತ್ತು. ಈಕೆಯ ಧರಣಿಯನ್ನು ನೋಡಿ ಅಲ್ಲಲ್ಲಿ ಶಾಲಾ ಮಕ್ಕಳು ‘ಪರಿಸರ ಮುಷ್ಕರ’ ಶುರು ಮಾಡಿದರು. ಅದೇ ದೊಡ್ಡದಾಗಿ ‘ಫ್ರೈಡೇ ಫಾರ್ ಫ್ಯೂಚರ್’ ಎನ್ನುವ ಚಳವಳಿಯೇ ಶುರುವಾಯಿತು. ಗ್ರೆಟಾ ಎಷ್ಟು ಜನಪ್ರಿಯ ವ್ಯಕ್ತಿಯಾದಳೆಂದರೆ, ಕಳೆದ ವರ್ಷ ಆಕೆಯನ್ನು ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಸಮ್ಮೇಳನಕ್ಕೆ ಆಹ್ವಾನಿಸಲಾಯಿತು. ಈ ಚಳವಳಿ ಶುರುವಾಗಿ ಕಳೆದ ಒಂದು ವರ್ಷದಲ್ಲಿ ಗ್ರೆಟಾ ಜಗತ್ತಿನ ಹಲವೆಡೆ ಪ್ರತಿಭಟನೆ, ಸಮಾವೇಶಗಳಲ್ಲಿ ಭಾಗವಹಿಸಿದ್ದಾಳೆ. ಹವಾಮಾನ ಬದಲಾವಣೆಯ ಕುರಿತು ಜಗತ್ತಿನಾದ್ಯಂತ ನಡೆಯುತ್ತಿರುವ ಚಿಂತನ ಮಂಥನಗಳಲ್ಲಿ ಗ್ರೆಟಾಳ ಪುಟ್ಟದೊಂದು ಮೊದಲ ಹೆಜ್ಜೆ ಚರ್ಚೆಯಾಗುತ್ತಲೇ ಇದೆ.

ಈಗ ವಿಶ್ವಸಂಸ್ಥೆಯ ಹವಾಮಾನ ಸಮ್ಮೇಳನ ನ್ಯೂಯಾರ್ಕ್‌ನಲ್ಲಿ ನಡೆಯುತ್ತಿದ್ದು ಅದರಲ್ಲಿ ಗ್ರೆಟಾ ಬಹುದೊಡ್ಡ ಆಕರ್ಷಣೆ. ಹವಾಮಾನ ಬದಲಾವಣೆಗೆ ಸರ್ಕಾರಗಳ ಮೇಲೆ ಸತತವಾಗಿ ಒತ್ತಡ ಹೇರುವ ಸ್ಫೂರ್ತಿಯುತ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿರುವ ಗ್ರೆಟಾಗೆ ಇದೇ ವೇಳೆ, ಪರ್ಯಾಯ ನೋಬೆಲ್ ಪ್ರಶಸ್ತಿ ಎಂದೇ ಹೆಸರಾಗಿರುವ ‘ರೈಟ್ ಲೈವ್ಲಿಹುಡ್’ ಪ್ರಶಸ್ತಿ ಪ್ರಕಟವಾಗಿದೆ. ‘ಜಗತ್ತಿನಲ್ಲಿ ಬದಲಾವಣೆಗಳನ್ನು ಉಂಟುಮಾಡುವ ಶಕ್ತಿ ಎಲ್ಲರಿಗೂ ಇದೆ. ಆದರೆ ಗ್ರೆಟಾಳಂತಹ ಕೆಲವರು ಮಾತ್ರ ಆ ಶಕ್ತಿಯನ್ನು ಅರಿತುಕೊಂಡು ಹೋರಾಟಗಳನ್ನು ರೂಪಿಸುತ್ತಾರೆ. ಈಕೆಯ ಪ್ರೇರಣೆಯಿಂದ ಜಗತ್ತಿನಾದ್ಯಂತ ಹಲವರು ತಮ್ಮ ದೇಶಗಳ ಸರ್ಕಾರಗಳ ಮೇಲೆ ಹವಾಮಾನ ಬದಲಾವಣೆಯ ವಿಷಯಕ್ಕೆ ಸಂಬಂಧಿಸಿ ಕ್ಷಿಪ್ರ ಕ್ರಮಗಳನ್ನು ಕೈಗೊಳ್ಳಲು ಒತ್ತಡ ಹೇರಿದ್ದಾರೆ’ ಎಂದು ಪ್ರಶಸ್ತಿ ಸಮಿತಿ ಅಭಿನಂದಿಸಿದೆ. 16ರ ಈ ಬಾಲೆಗೆ 10 ಲಕ್ಷ ಕ್ರೋನರ್ (ಸುಮಾರು 1.03 ಲಕ್ಷ ರೂಪಾಯಿ)ಗಳ ದೊಡ್ಡ ಮೊತ್ತದ ಬಹುಮಾನ ಘೋಷಣೆಯಾಗಿದೆ. ಈಕೆಯ ಜೊತೆಗೆ ಅಮೆಜಾನ್ ಕಾಡುಗಳ ಮತ್ತು ಅಲ್ಲಿನ ಜನರ ರಕ್ಷಣೆಗಾಗಿ ಹೋರಾಡುತ್ತಿರುವ ಡಾವಿ ಕೊಮೆನವಾ, ಪಶ್ಚಿಮ ಸಹಾರಾದ ರಕ್ಷಣೆಗಾಗಿ ಅಹಿಂಸಾತ್ಮಕ ಚಳವಳಿ ನಡೆಸಿರುವ ಮೊರೊಕ್ಕೋದ ಹೋರಾಟಗಾರ್ತಿ ಆಮಿನತೊ ಹೈದರ್, ಚೀನಾದಲ್ಲಿ ಮಹಿಳೆಯರ ಹಕ್ಕುಗಳಿಗೆ ಹೋರಾಡುತ್ತಿರುವ ವಕೀಲ ಗುವೊ ಜಿಯಾನ್ಮಿ ಕೂಡಾ ‘ರೈಟ್ ಲೈವ್ಲಿಹುಡ್’ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಗ್ರೆಟಾ ಅತ್ಯುತ್ತಮ ವಾಗ್ಮಿಯೂ ಹೌದು. ಕಳೆದ ವಾರ ವಿಶ್ವಸಂಸ್ಥೆಯ ಸಮಾವೇಶದಲ್ಲಿ ಮಾತನಾಡುತ್ತಾ ಆಕೆ ಸಭಿಕರನ್ನು ಪ್ರಶ್ನೆಗಳ ಮೂಲಕ ಮಂತ್ರಮುಗ್ಧಗೊಳಿಸಿದಳು. ‘ನಾವೆಲ್ಲಾ ಸಾಮೂಹಿಕವಾಗಿ ವಿನಾಶದತ್ತ ಸಾಗುತ್ತಿದ್ದೇವೆ. ಆದರೆ ನೀವೆಲ್ಲ ಖರ್ಚಾಗುವ ಹಣದ ಬಗ್ಗೆ ಮಾತನಾಡುತ್ತಿದ್ದೀರಿ. ರಾಜಕೀಯ ನಾಯಕರೇ, ನನ್ನ ಪೀಳಿಗೆಯನ್ನು ನೀವು ವಂಚಿಸುತ್ತಿದ್ದೀರಿ. ನಿಮಗೆಷ್ಟು ಧೈರ್ಯ..?’ ಎಂದು ಆಕೆ ಸಭಿಕರನ್ನು ಪ್ರಶ್ನಿಸಿದಾಗ ಕರತಾಡನ ಮೊಳಗಿತು.

ಗ್ರೆಟಾಳ ನಿರ್ಭೀತ ಪ್ರಶ್ನೆಗಳು ಮತ್ತು ಆಲೋಚನಾ ಕ್ರಮ ವಿಶ್ವದ ಅತಿದೊಡ್ಡ ನಾಯಕರನ್ನೂ ಪ್ರತಿಕ್ರಿಯೆ ನೀಡುವಂತೆ ಪ್ರಚೋದಿಸುತ್ತಿವೆ. ಕೆಲವರು ಈಕೆಯ ಧೈರ್ಯವನ್ನು ಮೆಚ್ಚಿ ಪ್ರಭಾವಿತರಾದರೆ, ಇನ್ನು ಕೆಲವರು ಈಕೆಯ ಕುರಿತು ವ್ಯಂಗ್ಯವಾಡಿದ್ದಾರೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈಕೆಯ ಭಾಷಣದ ತುಣುಕುಗಳ ಬಗ್ಗೆ ತನ್ನ ಜಾಲತಾಣದಲ್ಲಿ ಲೇವಡಿ ಮಾಡಿದರೆ, ಲಕ್ಸುರಿ ಬ್ರ್ಯಾಂಡ್‌ಗಳ ದೈತ್ಯ ಕಂಪೆನಿ ಎಲ್‌ವಿಎಂಎಚ್ ಗ್ರೂಪ್‌ನ ಒಡೆಯ ಬರ್ನಾರ್ಡ್ ಅರ್ನಾಲ್ಟ್, ‘ಈಕೆ ಸರ್ವಜ್ಞಳಂತೆ ಮಾತನಾಡುತ್ತಿದ್ದಾಳೆ. ಯುವಜನರನ್ನು ಈಕೆಯ ಮಾತುಗಳು ನಿರುತ್ಸಾಹಗೊಳಿಸುತ್ತಿವೆ’ ಎಂದಿದ್ದಾನೆ.

ಅಮೆರಿಕದ ಅಧ್ಯಕ್ಷ ಟ್ರಂಪ್ ಈಕೆಯನ್ನು ಟೀಕಿಸಿದ ಬೆನ್ನಲ್ಲೆ ಜಗತ್ತಿನಾದ್ಯಂತ ಯುವಜನರು ಪ್ರತಿಭಟನೆಯ ಟ್ವೀಟ್‌ಗಳ ಸುರಿಮಳೆಯನ್ನೇ ಸುರಿಸಿದ್ದಾರೆ. ಮೊದಲ ಮೂರು ಗಂಟೆಗಳಲ್ಲಿ 16 ಸಾವಿರಕ್ಕೂ ಹೆಚ್ಚು ಜನರು ಗ್ರೆಟಾಳನ್ನು ಬೆಂಬಲಿಸಿ ಜಾಲತಾಣಗಳಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ‘ಮುಗ್ಧ ಯುವತಿಯೊಬ್ಬಳ ವಿರುದ್ಧ ಟ್ರಂಪ್ ಟೀಕೆ ನಡೆಸಿರುವುದು ಜಿಗುಪ್ಸೆ ಹುಟ್ಟಿಸಿದೆ’ ಎಂದು ಜಾಲಿಗರು ಟ್ರಂಪ್ ವಿರುದ್ಧ ಟ್ರಾಲಿಂಗ್ ನಡೆಸಿದ್ದಾರೆ.

ಹವಾಮಾನ ಬದಲಾವಣೆ ತಡೆಗೆ ತುರ್ತು ಕ್ರಮಗಳನ್ನು ಕೈಗೊಳ್ಳಲು ಎಲ್ಲ ದೇಶಗಳ ಸರ್ಕಾರಗಳ ಮೇಲೆ ಒತ್ತಡ ಹೆಚ್ಚಾಗುತ್ತಿದೆ. ಮುಖ್ಯವಾಗಿ ಹೊಗೆಯುಗುಳುವ ಎಲ್ಲ ಆಧುನಿಕ ಸೌಲಭ್ಯಗಳನ್ನು ನಿಲ್ಲಿಸುವ ನಿಟ್ಟಿನಲ್ಲಿ ಪ್ರತಿಭಟನೆಯ ಕಾವು ಏರುತ್ತಿದೆ. ಕಳೆದ ವರ್ಷ ಆಗಸ್ಟ್‌ನಲ್ಲಿ ಮೊದಲ ಬಾರಿಗೆ ಮೂರು ವಾರಗಳ ಕಾಲ ತನ್ನ ಶಾಲೆಗೆ ರಜೆ ಹಾಕಿದ ಗ್ರೆಟಾ ಸ್ವೀಡನ್ನಿನ ಪಾರ್ಲಿಮೆಂಟ್ ಮುಂದೆ ಧರಣಿ ಕುಳಿತಿದ್ದಳು. ಅಲ್ಲಿಂದೀಚೆಗೆ ಪ್ರತಿ ಶುಕ್ರವಾರವೂ ಆಕೆ ಪಾರ್ಲಿಮೆಂಟ್ ಮುಂದೆ ಇಡೀ ದಿನ ಕುಳಿತು ‘ಸ್ಕೂಲ್ ಸ್ಟ್ರೈಕ್ ಫಾರ್ ಕ್ಲೈಮ್ಯಾಟ್’ ಎಂಬ ಬೋರ್ಡನ್ನು ಪ್ರದರ್ಶಿಸುತ್ತಿದ್ದಾಳೆ. ಆಕೆಯ ಬೆಂಬಲಕ್ಕೆ ಶಾಲಾ ಮಕ್ಕಳ ದೊಡ್ಡ ಗುಂಪೇ ನೆರೆಯುತ್ತಿದೆ. ಕಳೆದ ವರ್ಷ ನ್ಯೂಯಾರ್ಕ್‌ನಲ್ಲಿ ವಿಶ್ವಸಂಸ್ಥೆಯ ಹವಾಮಾನ ಸಮ್ಮೇಳನದಲ್ಲಿ ಮಾತನಾಡಲು ಆಕೆಗೆ ಆಹ್ವಾನ ಬಂದಾಗ, ಆಕೆ ವಿಮಾನದಲ್ಲಿ ಪ್ರಯಾಣಿಸುವುದನ್ನು ತಿರಸ್ಕರಿಸಿದ್ದಳು. ಹಾಯಿದೋಣಿಯೊಂದರಲ್ಲಿ ಅಟ್ಲಾಂಟಿಕ್ ಸಾಗರದ ಮೇಲೆ ಎರಡು ವಾರಗಳ ಕಾಲ ಪ್ರಯಾಣಿಸಿ ಆಕೆ ನ್ಯೂಯಾರ್ಕ್ ತಲುಪಿದ್ದಳು.

ಡಿಸೆಂಬರ್ 4ರಂದು ಸ್ಟಾಕ್‌ಹೋಮ್‌ನಲ್ಲಿ ‘ರೈಟ್ ಲೈವ್ಲಿಹುಡ್ ಪ್ರಶಸ್ತಿ’ ಪ್ರದಾನ ಸಮಾರಂಭ ನಡೆಯಲಿದೆ. ಈಗಾಗಲೆ ಗ್ರೆಟಾಗೆ ಹಲವು ಪ್ರಶಸ್ತಿಗಳು ಸಂದಿವೆ. ಪ್ರತಿ ಪ್ರಶಸ್ತಿ ಸಿಕ್ಕಿದಾಗಲೂ ಆಕೆ ಹೇಳುವುದು ಒಂದೇ ಮಾತು. ‘ಇದು ನನಗೆ ಸಂದ ಗೌರವವಲ್ಲ. ಈ ಜಗತ್ತಿನ ಪ್ರತಿಯೊಬ್ಬ ಶಾಲಾ ಮಕ್ಕಳಿಗೆ ಸಂದ ಗೌರವ.’

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65